ಮೇಲಿನ 4 ರೈಲು ಯೋಜನೆ ಸೂಕ್ಷ್ಮವಾಗಿ ಪರಿಶೀಲಿಸುವುದು, ಮತ್ತು ಕೆ-ರೈಡಿಗೆ ಅಗತ್ಯವಾದ ಹಣ ಒದಗಿಸುವುದು ಹಾಗೂ ಇದರೊಂದಿಗೆ ಇವುಗಳ ದಾಖಲೆಗಳನ್ನು ತಯಾರಿಸುವುದು. ಐಡಕ್ ಸಂಸ್ಥೆಯು ಕೆ-ರೈಡ್ ಕಂಪನಿಯನ್ನು ಸ್ಥಾಪಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದು ಈಗ ಅದರ ಕರಡು ವ್ಯವಹಾರಿಕ ಯೋಜನೆಯನ್ನು ತಯಾರಿಸಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ನಾಗಮಂಗಲ ಮತಕ್ಷೇತ್ರದಲ್ಲಿ ಶ್ರೀ ಶ್ರೀನಿವಾಸ ಡಿಸ್ಟಿಲರೀಸ್‌ರವರು ಅನಧಿಕೃತವಾಗಿ ಏರ ವೈಷ್ಣವಿ ನದಿ ನೀರು ಪಡೆಯುತ್ತಿರುವ ವಿಚಾರ.

3006(3812)

ಶ್ರೀ ಚಲುವರಾಯ ಸ್ವಾಮಿ ಎನ್.(ನಾಗಮಂಗಲ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನಾಗಮಂಗಲ ಮತಕ್ಷೇತ್ರದ ಹಾಲಳು ಸರ್ವೆ ನಂ.22ರಲ್ಲಿ ಅನಧಿಕೃತವಾಗಿ ಶ್ರೀ ಶ್ರೀನಿವಾಸ ಡಿಸ್ಟಿಲರೀಸ್‌ರವರು ನಿರ್ಮಾಣ ಮಾಡುತ್ತಿರುವ ಕಟ್ಟಡಕ್ಕೆ ಅನಧಿಕೃತವಾಗಿ ಏರ ವೈಷ್ಣವಿ ನದಿಯ ನೀರು ಉಪಯೋಗಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಬಂದಿದ್ದರೆ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಚ್.ಕೆ.ಪಾಟೀಲ್: (ಜಲಸಂಪನ್ಮೂಲ ಮಂತ್ರಿಗಳು):

ಅ. ಮೆ. ಶ್ರೀ ಶ್ರೀನಿವಾಸ ಡಿಸ್ಟಿಲರೀಸ್ ಪ್ರೈ.ಲಿ., ಸಂಸ್ಥೆಯವರಿಗೆ ಏರ ವೈಷ್ಣವಿ ಹಳ್ಳದಿಂದ ನೀರನ್ನು ಪಡೆಯುವ ಬಗ್ಗೆ ನೀರಿನ ಲಭ್ಯತೆಯನ್ನು ದೃಢಪಡಿಸಿಕೊಂಡು ಸರ್ಕಾರದಿಂದ ಅನುಮೋದನೆ ನೀಡಲಾಗಿದೆ.

ಆ. ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ನಾಗಮಂಗಲ ಮತಕ್ಷೇತ್ರದಲ್ಲಿ ಹೇಮಾವತಿ ಎಡದಂಡೆ ನಾಲೆ(7)ರಲ್ಲಿ ಬಾಕಿ ಇರುವ ಕಾಮಗಾರಿ.

3007(3813)